ಶ್ರೀ ಎ. ರಾಮದಾಸ್:- ಹಾಗಾದರೆ, ನಮ್ಮ ಬಿಲ್ಲಿನ ಮತದಾನದ ಹಕ್ಕನ್ನು ಕಳೆದುಕೊಳ್ಳುವುದಾ?

ಅಧ್ಯಕ್ಷರು: ನಾನು ಯಾರನ್ನೂ ಯಾವ ವಿಚಾರದಲ್ಲೂ ನಿರ್ಬಂಧ ಮಾಡುವುದಿಲ್ಲ. ನನಗೆ ಇಲ್ಲದೇ ಇರುವ ಅಧಿಕಾರವನ್ನು ಉಪಯೋಗಿಸಿಕೊಂಡು ನಿಮ್ಮನ್ನು ರಕ್ಷಣೆ ಮಾಡುವುದಕ್ಕಾಗುತ್ತದೆಯೇ? ಬಿಸ್‌ನೆಸ್ ಅಡ್ವೈಸರಿ ಕಮಿಟಿ ಅಡ್ವೈಸ್ ಪ್ರಕಾರ ಬಿಸ್‌ನೆಸ್‌ನ್ನು ಶೆಡ್ಯುಲ್ ಮಾಡಿದ್ದೇನೆ, 26ನೇ ತಾರೀಖು ಅಸೆಂಬ್ಲಿ ಇರುತ್ತದೆ, ಅವತ್ತು ಬರುವವರು ಇರುತ್ತಾರೆ, ಬರದೇ ಇರುವವರು ಇರುತ್ತಾರೆ, ಪರಿಷ್ಷನ್ ಕೇಳುವವರು ಇರುತ್ತಾರೆ, ಅಬ್ಸೆಂಟ್ ಆಗುವವರು ಇರುತ್ತಾರೆ, ಈ ಹಕ್ಕು ತಮಗೇ ಇರುತ್ತದೆ. ಅದೆಲ್ಲಾ ತಮ್ಮ ವಿವೇಚನೆಗೆ ಬಿಟ್ಟಂದ್ದು. ಅವರ ಚುನಾವಣಾ ವೇಳಾ ಪಟ್ಟಿಯನ್ನು ಚೇಂಜ್ ಮಾಡುವುದಕ್ಕೆ ನಾನು ಹೇಳುವುದಕ್ಕಾಗುವುದಿಲ್ಲ. ಆ ತರಹ ಹೊಸ ಸಂಪ್ರದಾಯಗಳನ್ನು ಈ ಅಧ್ಯಕ್ಷ ಪೀಠದಿಂದ ನಾನು ಹಾಕಲಿಕ್ಕೆ ಬರುವುದಿಲ್ಲ. ನಾನು, ನಿಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲಿಕ್ಕೆ ಅವಕಾಶ ಕೊಟ್ಟಿದ್ದೇನೆ, ಸರ್ಕಾರ ಅದಕ್ಕೆ ಉತ್ತರವನ್ನು ಕೊಟ್ಟಿದೆ. ಏನು ಸರಿತೋಚಿದೆಯೋ ಆ ರೀತಿ ಉತ್ತರವನ್ನು ಸರ್ಕಾರ ಕೊಟ್ಟಿದೆ. ನಿಮ್ಮ ಮತ್ತು ಅವರ ಮಧ್ಯೆ ಇದನ್ನು ಇತ್ಯರ್ಥ ಮಾಡಿಕೊಳ್ಳಬೇಕೇ ಹೊರತು ನಾನು ಮಧ್ಯೆ ಪ್ರವೇಶ ಮಾಡುವುದಕ್ಕೆ ನನ್ನ ಕಾರ್ಯ ವ್ಯಾಪ್ತಿಗೆ ಅದು ಬರತಕ್ಕಂಥಾದ್ದಲ್ಲ. ನನ್ನ ರಕ್ಷಣೆ ಮತ್ತು ನನ್ನ ಒಲವಿನ ಪ್ರಕಾರ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಅವಕಾಶ ಮಾಡಿಕೊಟ್ಟಿದ್ದೇನೆ.

ಶ್ರೀ ಎ. ರಾಮದಾಸ್:- ಚುನಾವಣೆ ದಿನಾಂಕವನ್ನು ಮುಂದೂಡಬೇಕೆಂದು ಸರ್ಕಾರಕ್ಕೆ ಮನವಿ ಮಾಡಿದರೂ ಅದಕ್ಕೆ ಪುರಸ್ಕಾರ ಕೊಡದೆ, ಈ ಮನೆಯ ಸದಸ್ಯರುಗಳಾದ ನಾವು 4 ಜನರ ಆ ಚುನಾವಣೆಯಲ್ಲಿ ಭಾಗವಹಿಸುವುದನ್ನು ತಪ್ಪಿಸಬೇಕೆಂದು ಆ ರೀತಿ ಮಾಡಿದ್ದಾರೆ. ಆದುದರಿಂದ, ನಾವು ಇದನ್ನು ಪ್ರತಿಭಟಿಸಿ ಧರಣೆಯನ್ನು ಮಾಡುತ್ತೇವೆ.

(ಮಾನ್ಯ ಸದಸ್ಯರಾದ ಶ್ರೀ ಎ. ರಾಮದಾಸ್‌ರವರು, ಶ್ರೀ ಮಾರುತಿರಾವ್ ಪವಾರ್‌ರವರು ಮತ್ತು ಶ್ರೀ ಶಂಕರಲಿಂಗೇಗೌಡರು ಬಾವಿಯೊಳಗೆ ಬಂದು ಧರಣೆ ಕುಳಿತರು.)

(ಖು) ಎ.ಪಿ.ಎಂ.ಸಿ. ಅಧ್ಯಕ್ಷರ ಚುನಾವಣೆ.

ಶ್ರೀ ಡಿ. ಆರ್.ಪಾಟೀಲ್ (ಗದಗ):- ಮಾನ್ಯ ಸಭಾಧ್ಯಕ್ಷರೆ, ಎ.ಪಿ.ಎಂ.ಸಿ., ಅಧ್ಯಕ್ಷರ ಚುನಾವಣೆಯನ್ನು ಮಾರ್ಚ್ 31ರೊಳಗೆ ಮಾಡಲಾಗುತ್ತದೆಂದು ಸರ್ಕಾರ ಈ ಸದನಕ್ಕೆ ಭರವಸೆ ಕೊಟ್ಟಿತ್ತು. ಇವತ್ತಿನ ಸಾಯಂಕಾಲದೊಳಗಾಗಿ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಆದೇಶ ಕೊಡದೇ ಇದ್ದರೆ ಕಾನೂನಿನ ಪ್ರಕಾರ ಮಾರ್ಚ್ 31 ರಂದು ಚುನಾವಣೆ ನಡೆಸಲಿಕ್ಕಾಗುವುದಿಲ್ಲ. ಇದು ಹೈಕೋರ್ಟ್‌ನ ಆದೇಶವನ್ನು ಉಲ್ಲಂಘಿಸಿದಂತಾಗುತ್ತದೆ. ಹೋದ ಏಪ್ರಿಲ್ 30 ರೊಳಗೆ ಎ.ಪಿ.ಎಂ.ಸಿ. ಚುನಾವಣೆಯನ್ನು ಪೂರ್ತಿ ಮಾಡಬೇಕೆಂದಾಗ, ಬರೀ ಸದಸ್ಯರ ಚುನಾವಣೆಯನ್ನು ಮಾಡಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಚುನಾವಣೆಯನ್ನು ಮಾಡದೆ ಒಮ್ಮೆ ಹೈಕೋರ್ಟ್‌ನ ಆದೇಶವನ್ನು ಉಲ್ಲಂಘನೆ ಮಾಡುವುದಕ್ಕೆ ದಯವಿಟ್ಟು ಅವಕಾಶ ಕೊಡಬಾರದು. ಈ ಸದನಕ್ಕೆ ಏನು ಭರವಸೆ ಕೊಡಲಾಗಿದೆಯೋ ಆ ಪ್ರಕಾರ 31ನೇ ತಾರೀಖಿನ ಒಳಗೆ ಚುನಾವಣೆ ನಡೆಸಲಿಕ್ಕೆ ಸಂಬಂಧಿಸಿದ ಅಧಿಕಾರಿಗಳಿಗೆ ಇವತ್ತೆ ಆದೇಶ ಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯ ತರುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ಸಭಾಧ್ಯಕ್ಷರೆ, ಹೈಕೋರ್ಟ್‌ನ ಆಜ್ಞೆಯನ್ನು ನಾವೇನೂದರೂ ಉಲ್ಲಂಘನೆ ಮಾಡಿದರೆ, ಅದಕ್ಕಿರತಕ್ಕಂಥ ಪ್ರಕ್ರಿಯೆಯನ್ನು ಹೈಕೋರ್ಟ್‌ನಲ್ಲಿ ಜಾರಿ ಮಾಡತಕ್ಕಂಥದ್ದಕ್ಕೆ ಅವಕಾಶ ಇದೆ. ನಾಮಕರಣ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆಯೆಂದು ಹೈಕೋರ್ಟ್‌ನವರು ಹೇಳಿದ್ದಾರೆ. ಅದಕ್ಕೆ ಅನುಗುಣವಾಗಿ ನಾವು ಕ್ರಮವನ್ನು ಕೈಗೊಳ್ಳುತ್ತಿದ್ದೇವೆ. ಇನ್ನು ಚುನಾವಣೆ ಮಾಡುವ ಬಗ್ಗೆ ಹೈಕೋರ್ಟ್‌ನವರು ನಮಗೆ ಆದೇಶವನ್ನು ಕೊಟ್ಟಿದ್ದಾರೆ. ಅದಕ್ಕೆ ಪೂರಕವಾಗಿ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಸರ್ಕಾರ ಮಾಡುತ್ತದೆ.

ಶ್ರೀ ಡಿ.ಆರ್.ಪಾಟೀಲ್:- ಕಂಟೆಮ್ಪ್ಟ್ ಆಫ್ ಕೋರ್ಟ್ ಹಾಕುವುದು ಪರ್ಯಾಯ ವ್ಯವಸ್ಥೆ ಇರುವುದರಿಂದ, ಮತ್ತೆ ಅವರು ಕೋರ್ಟ್‌ಗೆ ಹೋಗಲಿ ಎನ್ನುವ ಉದ್ದೇಶ ಸರ್ಕಾರಕ್ಕೆ ಇರಬಹುದು. ಎ.ಪಿ.ಎಂ.ಸಿ. ಚುನಾವಣೆ ಮಾಡುವುದಕ್ಕೆ ಕೋರ್ಟ್‌ಗೆ ಹೋದೆವು, ಮತ್ತೆ ಇದೇ ಅಧ್ಯಕ್ಷರನ್ನು ಚುನಾವಣೆ ಮಾಡುವುದಕ್ಕಾಗಿ ಕೋರ್ಟ್‌ಗೆ ಹೋದೆವು, ಈಗ ಕಂಟೆಮ್ಪ್ಟ್ ಮಾಡಲಿಕ್ಕೂ ಕೋರ್ಟ್‌ಗೆ ಹೋಗಿ ಎಂದರೆ, ಸರ್ಕಾರಕ್ಕೆ ಹೇಗೆ ವಕೀಲರುಗಳು ಪುಕ್ಕಟೆ ಇರುತ್ತಾರೋ ಹಾಗೆ ನಮಗೆ ಪುಕ್ಕಟೆ ಇರುವುದಿಲ್ಲ. 5 ಸಾವಿರ 10 ಸಾವಿರ ಫೀಸನ್ನು ವಕೀಲರುಗಳಿಗೆ ನಾವು ಕೊಡಬೇಕಾಗುತ್ತದೆ. ಈ ರೀತಿ ಉತ್ತರವನ್ನು ಸದನಕ್ಕೆ ಭರವಸೆ ಕೊಡಲಾಗಿತ್ತು, ನಾಮಿನೇಷನ್ ಮಾಡುವುದು ಬಿಡುವುದು ನಿಮ್ಮ ಹಕ್ಕು; ಬೇಕಾದರೆ ಮಾಡಿ ಕೊಳ್ಳಿ ಬೇಡವೆಂದರೆ ಬಿಡಿ. ಅದರೆ ಚುನಾವಣೆ ಮಾಡಿ. 11 ತಿಂಗಳಿನಿಂದ ಚುನಾವಣೆಯಾಗಿ ಅಧ್ಯಕ್ಷರಾಗುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

ಶ್ರೀ ಎಂ.ಸಿ. ನಾಣಯ್ಯ:- ಅಧ್ಯಕ್ಷರೇ, ನಾನು ಸರಕಾರದ ಪರವಾಗಿ ಉತ್ತರವನ್ನು ಹೇಳಿದ್ದೇನೆ. ಅಧ್ಯಕ್ಷರೆ ಮತ್ತು ಉಪಾಧ್ಯಕ್ಷರ ಆಯ್ಕೆಗೆ ಮಾಡತಕ್ಕಂಥ ಚುನಾವಣೆಯ ಬಗ್ಗೆ ಕಾನೂನಿನ ಅಡಿಯಲ್ಲಿ ಕ್ರಮ ಕೈಗೊಳ್ಳುತ್ತೇವೆ.

SRI M.C. NANAIAH: I am aware of it, now. As far as holding of election is concerned, depending up on the decision of the High Court upholding the legislative competence of the Legislature to nominate, we will take steps to conduct elections.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, ಅವರು ಹೇಳುವುದು ಏನೆಂದರೆ, ನಮಗೆ ಸಂವಿಧಾನದ ಪ್ರಕಾರ ಹಕ್ಕು ಇದೆ, ನಾಮಿನೇಟ್ ಮಾಡುವುದಕ್ಕೆ ಅಧಿಕಾರ ಈ ಅಸೆಂಬ್ಲಿಗೆ ಇದೆ ಅದನ್ನು ಅಪ್‌ಹೆಲ್ಡ್ ಮಾಡಿದ್ದಾರೆ. ಅದಕ್ಕಾಗಿ ಅದನ್ನು ನಾವು ಲಕ್ಷದಲ್ಲಿಟ್ಟುಕೊಂಡು ಮುಂದೆ ಚುನಾವಣೆ ನಡೆಸುತ್ತೇವೆಂದು ಅವರು ಹೇಳುತ್ತಾರೆ. ಆದರೆ ನಾವು ಏಕೆ ಚುನಾವಣೆಯನ್ನು ನಡೆಸುತ್ತಿಲ್ಲ? ಹೈಕೋರ್ಟ್‌ನ ಆದೇಶ ಇದ್ದರೂ ಕೂಡ ತಾವು ಏಕೆ ನಡೆಸುತಾ ಇಲ್ಲ? ಇದರಲ್ಲಿ ತಮ್ಮ ದುರುದ್ದೇಶ ಏನೆಂದರೆ, ನಾಮಿನೇಷನ್ ಪ್ರಾವಿಷನ್ ತಂದು ಅಮೇಲೆ ನಾಮಿನೇಟ್ ಮಾಡಿ ಪುನ: ಎಪಿಎಂಸಿ ಗೆ ಚುನಾವಣೆ ನಡೆಸತಕ್ಕಂಥ ಹೊಸ ಆದೇಶ ತಮ್ಮಲ್ಲಿ ಇದೆ. ನಾವು ಏನು ಹೇಳುತ್ತಿದ್ದೇವೆಂದರೆ, ತಾವು ಹೈಕೋರ್ಟ್ ಮೇಲೆ ನಂಬಿಕೆ ಇಟ್ಟುಕೊಂಡು ಕೆಲಸ ಮಾಡತಕ್ಕಂಥವರು ಹೈಕೋರ್ಟ್ ಆದೇಶ ನೀಡಿದ ಮೇಲೆ ಈ 5-6 ದಿವಸಗಳಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸ್ಥಾನಕ್ಕೆ ಏಕೆ ಚುನಾವಣೆಯನ್ನು ನಡೆಸಬಾರದು? ನೀವು ನಾಮಿನೇಟ್ ಮಾಡಬೇಕೆಂದರೆ ಚುನಾವಣೆಯಾದ ಮೇಲೆ ನಾಮಿನೇಟ್ ಮಾಡಿ ಕಳುಹಿಸಿ. ಅಲ್ಲಿ ಬಹಳ

ಎಕ್ಸ್‌ಪರ್ಟ್ ಅಡ್ವೈಸರ್‌ಬೇಕಲ್ಲಾ ಎಪಿಎಂಸಿಯನ್ನು ಉಳಿಸುವುದಕ್ಕೆ, ಅಲ್ಲಿ ಒಳ್ಳೆಯ ವ್ಯವಹಾರವನ್ನು ನಡೆಸುವುದಕ್ಕೆ ನಿಮ್ಮ ಎಕ್ಸ್‌ಪರ್ಟ್ ಅಡ್ವೈಸರ್ ಚುನಾವಣೆಯು ಆದ ಮೇಲೆ ಕಳುಹಿಸಿ, ಅವರು ಬಹಳ ವ್ಯವಸ್ಥಿತವಾಗಿ ನಡೆಸುತ್ತಾರೆ. ಅದಕ್ಕಿಂತ ಮುಂಚೆ ಏಕೆ ಬೇಕು ನಿಮಗೆ, ನಿಮ್ಮ ಉದ್ದೇಶ ಏನೆಂದರೆ, ಅಲ್ಲಿ ಎಕ್ಸ್‌ಪರ್ಟ್ಸ್ ಇಲ್ಲ ಅಲ್ಲಿ ಆರಿಸಿ ಬಂದವರು ಪಾಪ ರೈತರು ಅವರು ದಡ್ಡರು.

ಅಧ್ಯಕ್ಷರು:- ನನಗೆ ನಿಮ್ಮ ಉದ್ದೇಶವು ಗೊತ್ತ ಅವರ ಉದ್ದೇಶ ಕೂಡ ಗೊತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, ಹೈಕೋರ್ಟ್‌ನಿಂದ ಬಂದ ಆದೇಶಕ್ಕೂ ಕೂಡ ಅವರು ಮರ್ಯಾದೆಯನ್ನು ಕೊಡುವುದಿಲ್ಲವೆಂದರೆ ಮತ್ತೆ ಒಂದು ದುರುದ್ದೇಶವನ್ನು ಇಟ್ಟುಕೊಂಡು ಇದೇರೀತಿ ಮುಂದುವರೆಯುತ್ತೇವೆ ಎಂದರೆ ಹೇಗೆ?

ಅಧ್ಯಕ್ಷರು:- ಕಾನೂನು ಸಚಿವರೇ, ಸದನದಲ್ಲಿ ಎದ್ದು ನಿಂತು ಹೈಕೋರ್ಟ್‌ನ ಆದೇಶವನ್ನು ಒಂದು ವೇಳೆ ನಾವು ಉಲ್ಲಂಘನೆ ಮಾಡಿದ್ದರೆ, ಅದಕ್ಕೆ ಬೇಕಾದಂಥ ಕ್ರಮವನ್ನು ಜರುಗಿಸಬಹುದು ಎನ್ನತಕ್ಕಂಥ ಮಾತನ್ನು ಅವರು ಹೇಳಿದ ಮೇಲೆ ನಾನು ಹೇಳುವುದು ಏನು ಉಳಿದಿರುತ್ತದೆ? ನೀವು ಕಂಟೆಂಪ್ಟ್ ಪ್ರೊಸೀಡಿಂಗ್ಸ್ ಬೇಕಾದರೆ ಇನಿಷಿಯೇಟ್ ಮಾಡಿ ಎಂದು ಹೇಳಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅವರು ಹೇಳುವುದು ಏನೆಂದರೆ, ನಮಗೆ ಹಕ್ಕು ಇದೆ, ಇಲ್ಲವೆಂದು ಯಾರೂ ಹೇಳುವುದಿಲ್ಲ. ನೀವು ಹಕ್ಕನ್ನು ಚುನಾವಣೆಯಾದ ಮೇಲೆ ಚಲಾಯಿಸಿ, ಆದರೆ ಚುನಾವಣೆಯನ್ನು ಮಾಡಿ ಎಂದು ಆದೇಶವನ್ನು ಕೊಟ್ಟಿದ್ದಾರೆ ಈ 8 ದಿವಸದಲ್ಲಿ ಚುನಾವಣೆಯನ್ನು ಮಾಡಿ.

MR. SPEAKER:- We will conclude. It becomes a new precedent Generally I don't allow discussion in Zero hour.

ಶ್ರೀ ಡಿ. ಆರ್. ಪಾಟೀಲ್:- ಇದು ಬಹಳ ಮುಖ್ಯವಾಗಿದೆ ಎಂದು ನಾನು ಹೇಳುತ್ತೇನೆ, ಸದನಕ್ಕೆ ಕೊಟ್ಟ ಭರವಸೆಯನ್ನು ಸರ್ಕಾರ ಈಡೇರಿಸುತ್ತಿಲ್ಲ ಎನ್ನುವ ವಿಷಯವನ್ನು ತಮ್ಮ ಗಮನಕ್ಕೆ ತಂದರೂ ತಾವು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರೆ ನಾವು ಎಲ್ಲ ರಕ್ಷಣೆಯನ್ನು ಪಡೆದುಕೊಳ್ಳಬೇಕು ಹೇಳಿ ಸ್ವಾಮಿ?

ಶ್ರೀ, ಎಂ.ಸಿ. ನಾಣಯ್ಯ(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಅಧ್ಯಕ್ಷರೇ, ಮಾನ್ಯ ಖರ್ಗೆಯವರು ಹೇಳತಕ್ಕಂಥದ್ದು ನಿಜ, ಇದು ಸತ್ಯ ಕೂಡ ಅಪ್ಯೆ, ತಾವೂ ಕೂಡ ಆಡಳಿತವನ್ನು ನಡೆಸಿದ್ದೀರಿ, ಆಡಳಿತವನ್ನು ನಡೆಸತಕ್ಕಂಥ ಆ ಸಂದರ್ಭದಲ್ಲಿ ಇಂತಹ ವಿಚಾರಗಳು ಬಂದಾಗ ಕೆಲವು ತೀರ್ಮಾನಗಳನ್ನು ತೆಗೆದುಕೊಳ್ಳುವಂಥದ್ದು ಇವತ್ತು ಆಡಳಿತವನ್ನು ನಡೆಸತಕ್ಕಂಥ ನಾವೂ ಕೂಡ ಇಂತಹ ಸಂದರ್ಭಗಳು ಬಂದಾಗ ಯಾವ ಕ್ರಮವನ್ನು ಕೈಗೊಳ್ಳಬೇಕೆಂಬುದನ್ನು ತಾವು ಹೇಳಿದ್ದೀರಿ. ಅದಕ್ಕೆ ಅನುಗುಣವಾಗಿ ಆ ಹೈಕೋರ್ಟಿನ ಆದೇಶದ ತೀರ್ಪನ್ನು ಗಮನದಲ್ಲಿಟ್ಟುಕೊಂಡು ನಾವು ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ, ಎಂ. ಮಲ್ಲಿಕಾರ್ಜುನ ಖರ್ಗೆ:- ಕ್ಯಾಲೆಂಡರ್ ಆಫ್ ಇವೆಂಟ್ಸ್ ಹೋಗಬೇಕಲ್ಲಾ. ಅಧ್ಯಕ್ಷರೇ, ನೀವು ಹೇಳಿ, ಸದನ ಇದ್ದದ್ದು ಏಕೆ? ನಾವು ಕಾನೂನು ರಚಿಸುತ್ತೇವೆ, ಮತ್ತು ಕಾಮೂನಿನ ಪ್ರಕಾರ ನಡೆದುಕೊಳ್ಳುತ್ತೇವೋ ಅಥವಾ ಇಲ್ಲವೇ ಎನ್ನುವುದಕ್ಕೆ ಅದನ್ನು ಚರ್ಚೆ ಮಾಡುವುದಕ್ಕೆ ಸದನ ಇರತಕ್ಕಂಥದ್ದು.

ಅಧ್ಯಕ್ಷರು:- ನಾಮಿನೇಷನ್ಸ್ ಮುಖಾಂತರ ಈ ಚುನಾವಣೆಯ ಫಲಿತಾಂಶವನ್ನು ಟಿಲ್ಟ್ ಮಾಡತಕ್ಕಂಥದ್ದು they should become matters of conviction; they should not become matters of convenience. From time to time, whoever have been in office they have been using it for their convenience.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- you do it, ನಾನು ಹೇಳುತ್ತೇನೆ. ನಿಮಗೆ ಅಧಿಕಾರ ಇದೆ ನೀವು ಮಾಡಿ, ಯಾವಾಗ ಮಾಡಬೇಕು ಈ ಚುನಾವಣೆಯು ಆದ ನಂತರ ಮಾಡಿ, ಇಲ್ಲವೆಂದರೆ ನಿಮ್ಮ ಆರ್ಡಿನೆನ್ಸ್‌ನ್ನು ಲ್ಯಾಪ್ಸ್ ಆಗಿತ್ತು ನಿಮಗೆ ಬಹಳ ಇಂಟ್ರೆಸ್ಟ್ ಇದ್ದರೆ ನೀವು ಇನ್ನೊಮ್ಮೆ ಈ ಆರ್ಡಿನೆನ್ಸ್‌ನ್ನು ಇನ್ನೂ ಮಾಡಿಕೊಳ್ಳಬೇಕಾಗಿತ್ತು. ಕೋರ್ಟ್ ಆದೇಶ ಕೊಟ್ಟು 15-20 ದಿವಸವಾಯಿತು.

ಅಧ್ಯಕ್ಷರು:- ಬಜೆಟ್ ಮೇಲೆ ತಾವು ಮಾತನಾಡುವಾಗ ಹೇಳಿ, ಇದು ಶೂನ್ಯವೇಳೆಯಲ್ಲಿ ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಬಜೆಟ್ ಮೇಲೆ ಅಲ್ಲಾ ಸರ್, ಕಾನೂನಿನ ವಿರುದ್ಧವಾಗಿ ನಡೆದುಕೊಂಡರೂ ಸಹ ಇದು ನಡೆಯಲಿ ಎಂದರೆ ಈ ಸದನ ಏಕೆ ಬೇಕು? ನಾವು ಎಲ್ಲಿ ಹೇಳಬೇಕು?

ಅಧ್ಯಕ್ಷರು:- ಕಾನೂನಿನ ಸಚಿವರು ಎದ್ದು ನಿಂತು, ನಾವು ಕಾನೂನನ್ನು ಉಲ್ಲಂಘನೆ ಮಾಡಿದ್ದರೆ ಹೈಕೋರ್ಟ್ ಆದೇಶವನ್ನು ಉಲ್ಲಂಘನೆ ಮಾಡಿದ್ದೇವೆ ಎಂದು ಆದರೆ, ಅದಕ್ಕೆ ಕ್ರಮವನ್ನು ಜರುಗಿಸಿ ಎಂದು ಆಹ್ವಾನ ಕೊಟ್ಟ ಮೇಲೆ ನಾನು ಏನು ಮಾಡುವುದಕ್ಕಾಗುತ್ತದೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, ಏನು, ನಮಗೆ ಹೇಳಿ?

ಅಧ್ಯಕ್ಷರು:- ನಾವು ಹೈಕೋರ್ಟಿನ ಆದೇಶವನ್ನು ಉಲ್ಲಂಘನೆ ಮಾಡುತ್ತೇವೆ ಎನ್ನು ಅಭಿಪ್ರಾಯಕ್ಕೆ ನೀವು ಬಂದಿರುವುದಾದರೆ, ನೀವು ಅದಕ್ಕೆ ಕ್ರಮವನ್ನು ಜರುಗಿಸಬಹುದೆಂದು ಅವರು ಹೇಳುತ್ತಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಭಾರತೀಯ ಜನತಾ ಪಕ್ಷದ ಒಬ್ಬ ಸದಸ್ಯರು ಹೇಳಿದರು, ಕೆಟಗರಿ ವೈಸ್ ರಿಜರ್ವೇಷನ್ ಅಲ್ಲಿ ಹೇಗೆ ಮಾಡಬೇಕು ಎನ್ನುವುದರ ಬಗ್ಗೆ ಪ್ರಸ್ತಾಪ ಮಾಡುವಾಗ ಅವರು ಏನು ಅಂದರು, ಯಾರಿಗೆ ಶಕ್ತಿಯಿಲ್ಲವೆಂದು ಅವರು ಕೋರ್ಟಿಗೆ ಹೋಗಲಿ ಎಂದರು. ಮೂಕ ಜನರು, ಯಾರಿಗೆ ಶಕ್ತಿಯಿಲ್ಲವೆಂದು ನೀವು ರಿಜರ್ವೇಶನ್ ಕೊಟ್ಟಿದ್ದೀರಿ ಅವರ ಪರವಾಗಿ ಇಲ್ಲಿ ಯಾರಾದರೂ ಮಾತನಾಡಿದರೆ ಇದು ಇಲ್ಲೀಗಲ್ ಇದೆ ಎಂದು ಹೇಳಿದರೆ ನೀವು ಕೋರ್ಟಿಗೆ ಹೋಗಿ ಎಂದರೆ ಹೇಗೆ? ಎಲ್ಲಾ ಕೋರ್ಟಿನಲ್ಲಿ ತೀರ್ಮಾನವಾಗುವುದಾದರೆ ಈ ಸದನ ಏಕೆ ಬೇಕು? ಸದನದಲ್ಲಿ ಬರುವುದೇ ಬೇಡ. ಕಾನೂನಿಗೆ ವಿರುದ್ಧವಾದ ಮಾತುಗಳನ್ನು ಇಲ್ಲಿ ತಂದು ಪ್ರಸ್ತಾಪ ಮಾಡಿದಾಗ ಜನರ ನೋವುಗಳನ್ನು ಹೇಳಿದಾಗ contrary to rules or regualtions,ಅದನ್ನು ಪ್ರಸ್ತಾಪ ಮಾಡಿದರೂ ಕೂಡ ತಾವು ಸರಿ ಪಡಿಸುತ್ತೇವೆ ಎನ್ನುವುದನ್ನು ಬಿಟ್ಟು ನಿಮಗೆ ನೋವು ಆದರೆ ಕೋರ್ಟಿಗೆ ಹೋಗಿ ಅಂದರೆ ಏನು ಅರ್ಥ? ಎಲ್ಲರಿಗೂ ಕೋರ್ಟಿಗೆ ಹೋಗುವುದಕ್ಕಾಗುತ್ತದೆಯೇ? ಎಷ್ಟೋ ಕಡೆ

ಕೇಳುವವರು ದಿಕ್ಕು ಇರುವುದಿಲ್ಲ. ಅನೇಕ ಕಡೆ ಪಂಚಾಯಿತಿ ಚೀರಮನ್‌ರು ಅದರೂ ಕೂಡ 4-5- ತಿಂಗಳು ಸಭೆಗೆ ಅಟೆಂಡ್ ಮಾಡಿ ಕೊಡದೆ ಇದ್ದರು ಸುಮ್ಮನೆ ಕುಳಿತಿದ್ದಾರೆ. ಮೂಕ ಜನರು ಇದರ ಅರ್ಥ ನನಗೆ ಆಗುತ್ತಿಲ್ಲ.

(ಊ) ಮೈಸೂರು ನಗರ ಪಾಲಿಕೆಯ ಮೇಯರ್ ಹಾಗೂ ಉಪ ಮೇಯರ್ ಚುನಾವಣೆಗಳ.

ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ):- ಅಧ್ಯಕ್ಷರೇ, ನಮ್ಮ ಸದಸ್ಯರು ಬಾವಿಯಲ್ಲಿ ಇದ್ದಾರೆ. ಇವರು ಹೋದ ವಾರ ಅಲ್ಲಿರುವ ಕಮೀಷನ್‌ರರಿಗೆ ಪತ್ರವನ್ನು ಕೊಟ್ಟಿದ್ದಾರೆ. ಸಚಿವರಿಗೆ ಪತ್ರವನ್ನು ಕೊಟ್ಟಿದ್ದಾರೆ, ತಮಗೂ ಕೂಡ ನಿನ್ನ ಬರೆದು ಕೊಟ್ಟಿದ್ದಾರೆ. ಸಂಬಂಧಪಟ್ಟವರಿಗೆ ಮುಂಚೆಯೇ ಕೊಟ್ಟಿದ್ದಾರೆ. ಉದ್ದೇಶವಾಗಿ ನಿಮ್ಮ ಬಜೆಟ್ ಮೇಲೆ ಓಟಿಂಗ್ ಇಟ್ಟುಕೊಂಡು ಅವತ್ತು ಚುನಾವಣೆಯನ್ನು ಇಟ್ಟರೆ ಏನು ಮಾಡಬೇಕು ಹಾಗೆ ಅಧಿವೇಶನವನ್ನು ತಪ್ಪಿಸಿಕೊಳ್ಳುವುದೇ?

ಅಧ್ಯಕ್ಷರು:- ಬಜೆಟ್ ಮೇಲೆ ಓಟಿಂಗ್ 26ನೇ ತಾರೀಖಿಗೆ ಇಲ್ಲ. 27 ರಂದು ಇದೆ. ಅದು ಅವರ ವಿವೇಚನೆಗೆ ಬಿಟ್ಟಿದ್ದುದು. ನಾನು ಬರಬೇಡವೆಂದು ಹೇಳುತ್ತೇನೋ?

ಶ್ರೀ ವಾಟಾಳ್ ನಾಗರಾಜ್:- ತಮ್ಮ ಮುಖಾಂತರ ಮೇಯರ್ ಚುನಾವಣೆಯನ್ನು ಮುಂದಕ್ಕೆ ಹಾಕಿ ಎಂದು ಕೇಳಿಕೊಳ್ಳುತ್ತಿದ್ದಾರೆ ತಮ್ಮ ಮೂಲಕ ಸರ್ಕಾರವನ್ನು ಕೇಳಿರುವುದರಿಂದ ಚುನಾವಣೆಯನ್ನು ಮುಂದಕ್ಕೆ ಹಾಕುವುದು ಒಳ್ಳೆಯ ಸಂಪ್ರದಾಯವಾಗುತ್ತದೆ. ಮುಂದಕ್ಕೆ ಹಾಕದಿದ್ದರೆ ಉದ್ದೇಶಪೂರ್ವಕವಾಗಿ ಮತದಾನದಿಂದ ಹೊರಗೆ ಇಟ್ಟು ನಾವು ರಾಜಕೀಯವನ್ನು ಮಾಡಿ ಗೆಲ್ಲಬೇಕು ಎನ್ನುವ ತಂತ್ರ ನಡೆಯುತ್ತದೆ, ಆ ತಂತ್ರ ಬೇಕಾದಲ್ಲಿ ಸರ್ಕಾರಕ್ಕೆ ನೇರವಾಗಿ ಹೇಳುತ್ತೇವೆ, ನಿಮ್ಮ ತಂತ್ರವನ್ನು ಬೀದಿಗೆ, ಸಾಕಿ ನೇರವಾಗಿ ಅವಕಾಶ ಕೊಡಿ ಎಂದು ಅಷ್ಟೆ ನಾವು ಹೇಳುತ್ತಿರುವುದು.

ಶ್ರೀ ಸಿದ್ಯರಾಮಯ್ಯ(ಉಪ ಮುಖ್ಯಮಂತ್ರಿಗಳು):- ಅಧ್ಯಕ್ಷರೇ, ಒಂದು ವರ್ಷದ ಅವಧಿ ಮುಗಿದ ಮೇಲೆ ಸಭೆಯನ್ನು ನಿಗದಿ ಮಾಡುವವರು ಮೇಯರ್‌ವರು. ಅವರು ದಿನಾಂಕವನ್ನು ನಿಗದಿ ಮಾಡುತ್ತಾರೆ. ಸರ್ಕಾರವನ್ನು ಕೇಳಿ ಯಾವ ದಿನಾಂಕವನ್ನು ನಿಗದಿ ಮಾಡುವುದಿಲ್ಲ. ಅವರು 26ನೇ ದಿನಾಂಕವನ್ನು ನಿಗದಿ ಮಾಡಿದ್ದಾರೆ, ಅವರು ಸರ್ಕಾರವನ್ನು ಕೇಳಿರುವುದಿಲ್ಲ, ನಮ್ಮನ್ನು ಕೇಳಿರುವುದಿಲ್ಲ ಅವರಿಗೆ ಅಧಿಕಾರ ಇರುವುದರಿಂದ ಅವರು ಕಾನೂನಿನ ರೀತಿಯಲ್ಲಿ ಅದನ್ನು ಮಾಡಿದ್ದಾರೆ. ಅದನ್ನು ಮುಂದಕ್ಕೆ ಹಾಕುವುದು ಕೂಡ ಸರ್ಕಾರದಿಂದ ಸಾಧ್ಯವಿಲ್ಲ. ಅದರ ಬಗ್ಗೆ ನಾವು ಎಷ್ಟೇ ಚರ್ಚೆ ಮಾಡಿದರೂ ಕೂಡ....ಅದನ್ನು ಮಾಡುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು:- ಅವತ್ತು ಎಷ್ಟು ಗಂಟೆಗೆ ಚುನಾವಣೆ ಇದೆ?

ಶ್ರೀ, ಎಸ್.ಸುರೇಶಕುಮಾರ್ (ರಾಜಾಜಿನಗರ):- ಮೇಯರ್ ಉಪಮೇಯರ್ ಚುನಾವಣೆಯ ಜೊತೆಗೆ? transferable vote method ಇರುವುದರಿಂದ ಅಂದು ನಮ್ಮ ಸದಸ್ಯರು ಅಲ್ಲಿ ಇರಬೇಕು. ಮಾನ್ಯ ಉಪ ಮುಖ್ಯಮಂತ್ರಿಗಳು ಒಂದು ಸಲ ಸಮಯವನ್ನು ನಿಗದಿ ಮಾಡಿದ ಮೇಲೆ ಮತ್ತೆ ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ನಮ್ಮ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮುಂದೂಡುವುದೆ ಒಂದು ಕಾರ್ಯಕ್ರಮವಾಗಿದೆ. ಅದು ಸ್ಥಾಯಿ ಸಮಿತಿ ಇರಬಹುದು, ಅಥವಾ ಮೇಯರ್ ಚುನಾವಣೆ ಇರಬಹುದು. ನಮ್ಮ